**ಓ ಎಸ್ ನಂಃ 200-17**
**ಪಿ ಡಬ್ಲ್ಯೂ ಃ 1**

**ದಿಃ 11-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಎಸ್ ಎನ್ ವಕೀಲರಿಂದ**

35. ಸಾಮಾನ್ಯವಾಗಿ ಮೂಲ ವ್ಯಕ್ತಿ ಒಂದು ದಾಖಲೆಗೆ ಸಹಿ ಮಾಡಲು ಬರಲು ಆಗದೇ ಇರುವ ಪಕ್ಷದಲ್ಲಿ ಅವರು ಮುಕ್ತರುನಾಮೆ ಮುಖಾಂತರ ಇನ್ನೊಬ್ಬರನ್ನು ದಾಖಲೆಗೆ ಸಹಿ ಮಾಡಲು ನೇಮಿಸುತ್ತಾರೆ ಎಂದರೆ ಇರಬಹುದು. 1ನೇ ಪ್ರತಿವಾದಿ ತಾವು ಖುದ್ದು ಹಾಜರಾಗಿ ದಾಖಲೆಯನ್ನು ಬರೆದುಕೊಡಲು ಆಗುವುದಿಲ್ಲ ಎಂದು ಅವರು 3ನೇ ಪ್ರತಿವಾದಿಗೆ ಮುಕ್ತರುನಾಮೆಯನ್ನು ಬರೆದುಕೊಟ್ಟಿರುತ್ತಾರೆ ಎಂದು ನಾನು ಹೇಳಿರುತ್ತೇನೆ ಎಂದರೆ 1ನೇ ಪ್ರತಿವಾದಿಗೆ ಖುದ್ದು ಹಾಜರಾಗಿ ದಾಖಲೆ ಬರೆದುಕೊಡಲು ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ ಆದರೆ ಮುಕ್ತರುನಾಮೆಯನ್ನು 3ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ. ಸಾಕ್ಷಿಗೆ ಈಗ ದಿನಾಂಕಃ 08-12-2007ರ ಕ್ರಯದ ಕರಾರು ಪತ್ರವನ್ನು ತೋರಿಸಲಾಗಿ ಅದನ್ನು 3ನೇ ಪ್ರತಿವಾದಿ ನನಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದನ್ನು ಒಪ್ಪಿದ್ದು ಅದನ್ನು ನಿಡಿ 12 ಎಂದು ಗುರುತಿಸಲಾಯಿತು. ನಿಡಿ 12 1ನೇ ಪ್ರತಿವಾದಿ ಮಾಲೀಕರಾಗಿ ಬರೆದುಕೊಟ್ಟ ಕ್ರಯದ ಕರಾರು ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 08-12-2007ರಂದು 1ನೇ ಪ್ರತಿವಾದಿ ಸ್ಥಳದಲ್ಲಿರಲಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ದಿನಾಂಕಃ 08-12-2007ರಂದು ಸ್ಥಳದಲ್ಲಿ ಇಲ್ಲದೇ ಇದ್ದಿದ್ದರಿಂದ ಜಿ ಪಿ ಎ ಮೂಲಕ ನಾನು ನಿಡಿ 12ನ್ನು 3ನೇ ಪ್ರತಿವಾದಿಯಿಂದ ಬರೆಸಿಕೊಂಡಿರುತ್ತೇನೆ ಎಂದರೆ 1 ಮತ್ತು 3ನೇ ಪ್ರತಿವಾದಿಗಳು ಸೇರಿ ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಿಡಿ 12ರಲ್ಲಿ 1 ಮತ್ತು 3ನೇ ಪ್ರತಿವಾದಿಗಳು ಸೇರಿ ಬರೆದುಕೊಟ್ಟಿರುತ್ತಾರೆಂದು ನಮೂದು ಇಲ್ಲ ಎಂದರೆ ಸರಿಯಲ್ಲ. ನಿಡಿ 12 ಒಟ್ಟು 2 ಆಸ್ತಿಗಳಿಗೆ ಆಗಿರುತ್ತದೆ. ನಿಡಿ 12ರಲ್ಲಿ 2 ಜಮೀನುಗಳಿಗೂ ಬೇರೆ ಬೇರೆ ಚಕ್ಕುಬಂದಿ ಇರುತ್ತದೆ ಎಂದರೆ ಸರಿಯಲ್ಲ. ನಿಡಿ 12ರಲ್ಲಿ ತೋರಿಸಿರುವ 1 ಗುಂಟೆ ಜಮೀನು 1ನೇ ಪ್ರತಿವಾದಿಗೆ ಸಂಬಂದಿಸಿರುತ್ತದೆ. ನಿಡಿ 12ರಲ್ಲಿ ತೋರಿಸಿರುವ

1 ಗುಂಟೆ ಜಮೀನು 2ನೇ ಪ್ರತಿವಾದಿಗೆ ಸಂಬಂದಿಸಿರುತ್ತದೆ ಎಂದು ಬರೆದಿರುತ್ತದೆ ಎಂದರೆ ಮಹಮದ್ ಲಿಯಾಕತ್ ರವರು 2ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ಇತರೆ ಆಸ್ತಿಗಳ ಜೊತೆ ಬರೆದುಕೊಟ್ಟಿದ್ದು ಆದರೆ ಆ 1 ಗುಂಟೆ ಜಮೀನಿನ ಮೂಲ ಮಾಲೀಕರು 1ನೇ ಪ್ರತಿವಾದಿಯೇ ಆಗಿರುತ್ತಾರೆ. ನಿಡಿ 12ರಲ್ಲಿ

2 ನೇ ಪ್ರತಿವಾದಿಯ ಹೆಸರಿಗೆ ಎಂ ಆರ್ ನಂ 35/1998 ರಂತೆ ಖಾತೆಯಾಗಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 12 ರಲ್ಲಿ ತೋರಿಸಿದ 1 ಗುಂಟೆ ಜಮೀನನ್ನು ಸಹ ಈ ದಾವೆಯಲ್ಲಿ ಸೇರಿಸಿರುತ್ತೇನೆ. ನಿಡಿ 12 ರಲ್ಲಿ ತೋರಿಸಿದ 1 ಗುಂಟೆ ಜಮೀನನ್ನು ಈ ಹಿಂದೆ ನಾನು ಹೂಡಿದ್ದ ಒ ಎಸ್ ನಂ 363/2012 ರಲ್ಲಿ ಸೇರಿಸಿದ್ದೆ. ಒ ಎಸ್ ನಂ 363/2012 ನ್ನು 9 ಗುಂಟೆ ಜಮೀನಿಗೆ ಮಾತ್ರ ಹೂಡಿದ್ದು ನಿಡಿ 12 ರಲ್ಲಿ ತೋರಿಸಿದ 1 ಗುಂಟೆ ಜಮೀನನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 12 ರಲ್ಲಿ ತೋರಿಸಿದ 1 ಗುಂಟೆ ಜಮೀನಿನ ಷೆಡ್ಯೂಲ್ ಒ ಎಸ್ ನಂ 363/12 ರಲ್ಲಿ ಇರುವುದಿಲ್ಲ ಎಂದರೆ ಒ ಎಸ್ ನಂ 363/12 ರಲ್ಲಿ ತೋರಿಸಿದ ಷೆಡ್ಯೂಲ್ 1 ಗುಂಟೆ ಜಮೀನನ್ನು ಒಳಗೊಂಡಿರುತ್ತದೆ ಮತ್ತು ಒಂದೇ ಷೆಡ್ಯೂಲ್ ಇರುತ್ತದೆ ಎಂದು ಹೇಳುತ್ತಾರೆ. ನಿಡಿ 12 ರಲ್ಲಿ ತೋರಿಸಿದ 1 ಗುಂಟೆ ಜಮೀನಿನ ಚಕ್ಕುಬಂದಿ ಒ ಎಸ್ ನಂ 363/12 ರಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 08-12-2007 ರ ಕ್ರಯದ ಕರಾರು ಪತ್ರವನ್ನು ನೆಲಮಂಗಲದ ಒಂದು ಕಛೇರಿಯಲ್ಲಿ ಬರೆದಿದ್ದು ಅದನ್ನು ಯಾರು ಬರೆದಿರುತ್ತಾರೆ ಅವರ ಹೆಸರು ನೆನಪಿಲ್ಲ. ನಿಡಿ 12 ಬರೆಯುವಾಗ ಸ್ಥಳದಲ್ಲಿ ನಾನು, 1 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿ ಹಾಜರಿದ್ದು ಬೇರೆಯವರ ಸಹಿ ಕೂಡ ಪಡೆಯಲಾಗಿತ್ತು. ನಿಡಿ 12 ಕ್ಕೆ 1 ಮತ್ತು 3 ನೇ ಪ್ರತಿವಾದಿಗಳು ಮಾತ್ರ ಸಹಿ ಮಾಡಿರುತ್ತಾರೆ. ನಿಡಿ 12 ರಲ್ಲಿ ತೋರಿಸಿದ ಷರಾಗಳು ಒಂದೇ ದಿನ ಅಂದರೆ ದಿನಾಂಕಃ 23-09-2010 ರಂದು ಆಗಿರುತ್ತವೆ ಎಂದರೆ ಸರಿಯಲ್ಲ. ನಿಡಿ 12 ಆಗುವಾಗ 1 ನೇ ಪ್ರತಿವಾದಿ ಸ್ಥಳದಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ 12 ರಲ್ಲಿ ತೋರಿಸಿದ ಷರಾಗಳು ಬರೆಯುವಾಗಲು ಸಹ 1 ನೇ ಪ್ರತಿವಾದಿ ಹಾಜರಿರಲಿಲ್ಲ ಮತ್ತು ಅವರು ನನ್ನ ಕಡೆಯಿಂದ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ 1 ನೇ ಪ್ರತಿವಾದಿ ಸ್ಥಳದಲ್ಲಿಯೇ ಇದ್ದಿದ್ದರೆ ನೇರವಾಗಿ ಅವರ ಕಡೆಯಿಂದ ಕ್ರಯದ ಕರಾರು ಪತ್ರವನ್ನು ಬರೆಸಿಕೊಳ್ಳಬಹುದಾಗಿತ್ತು ಜಿ ಪಿ ಎ ಅವರ ಮೂಲಕ ಕ್ರಯದ ಕರಾರು

ಪತ್ರವನ್ನು ಬರೆಸಿಕೊಳ್ಳುವ ಪ್ರಮೇಯ ಬರುತ್ತಿರಲಿಲ್ಲ ಎಂದರೆ 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ನೊಂದಾಯಿತ ಜಿ ಪಿ ಎ ಮಾಡಿಕೊಟ್ಟಿದ್ದರಿಂದ 3 ನೇ ಪ್ರತಿವಾದಿಯಿಂದ ಕ್ರಯದ ಕರಾರು ಪತ್ರವನ್ನು ಸಹ ಬರೆಸಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆಂದು ಹೇಳುವ ಜಿ ಪಿ ಎ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ 12 ರಲ್ಲಿ 3 ನೇ ಪ್ರತಿವಾದಿ ಹಾಗೂ ನಿಡಿ 12 ರ ಆಸ್ತಿಯ ಮಾಲೀಕರಾದ ಮಹಮ್ಮದ್ ಲಿಯಾಕತ್ ಅವರು ಖುದ್ದು ಹಾಜರಾಗಿ ನಿಡಿ 12 ನ್ನು ಬರೆದುಕೊಟ್ಟಿರುವ ಬಗ್ಗೆ ನಿಡಿ 12 ರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಡಿ 12 ಮತ್ತು ಅದರಲ್ಲಿರುವ ಷರಾಗಳನ್ನು ನಾನು ಮತ್ತು 3 ನೇ ಪ್ರತಿವಾದಿ

ಸೇರಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ನಾನು ಚೆಕ್ ಕೊಟ್ಟಿರುವುದಾಗಿ ಹೇಳಿದ್ದು ಆ ಬಗ್ಗೆ 1 ನೇ ಪ್ರತಿವಾದಿ ಹಣವನ್ನು ಡ್ರಾ ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಪಡಿಸಿರುತ್ತೇನೆ ಇಲ್ಲವಾದರೆ ಹಾಜರುಪಡಿಸುತ್ತೇನೆ ಎಂದು ಹೇಳುತ್ತಾರೆ. ನಾನು ಮತ್ತು 3 ನೇ ಪ್ರತಿವಾದಿ ಸೇರಿ ದಿನಾಂಕಃ 08-12-2007 ರ ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿದ್ದರಿಂದ ಅದರಲ್ಲಿ ತೋರಿಸಿರುವ 9 3/4 ಗುಂಟೆ ಜಮೀನಿಗೂ ಮತ್ತು 1 ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಓ ಎಸ್ ನಂ 363/2012 ರಲ್ಲಿ ನ್ಯಾಯಾಲಯ 1 ನೇ ಪ್ರತಿವಾದಿಯ ವಿರುದ್ಧ ಯಾವುದೇ ಆದೇಶ ಮಾಡಿಲ್ಲ ಎಂದರೆ ಸರಿಯಲ್ಲ.

36. ದಿನಾಂಕಃ 17-10-2007 ರಂದು 1 ನೇ ಪ್ರತಿವಾದಿ ತಮ್ಮ ಮಾಲೀಕತ್ವದ 9 3/4 ಗುಂಟೆ ಜಮೀನನ್ನು 5 ನೇ ಪ್ರತಿವಾದಿಯ ಗಂಡನಾದ ಸಯ್ಯದ್ ಜಲೀಲ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ ದಿನಾಂಕಃ 17-10-2007 ರಂದು 1 ನೇ ಪ್ರತಿವಾದಿ ಸಯ್ಯದ್ ಜಲೀಲ್ ರವರಿಗೆ 9 3/4 ಗುಂಟೆ ಜಮೀನಿಗೆ ಸಂಬಂದಿಸಿದಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ದಿನಾಂಕಃ 17-10-2007 ರಂದು ಸಯ್ಯದ್ ಜಲೀಲ್ ರವರ ಹೆಸರಿಗೆ ಆದ ಕ್ರಯದ ಕರಾರು ಪತ್ರದ ನಂತರ ನಾನು ದಿನಾಂಕಃ 08-12-2007 ರಂದು ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸಯ್ಯದ್ ಜಲೀಲ್‌ರವರು ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. 9 3/4 ಗುಂಟೆ ಜಮೀನಿಗೆ ಸಂಬಂದಿಸಿದಂತೆ

ಸಯ್ಯದ್ ಜಲೀಲ್‌ರವರು 1 ನೇ ಪ್ರತಿವಾದಿಯ ವಿರುದ್ಧ ಇದೇ ನ್ಯಾಯಾಲಯದಲ್ಲಿ 1 ದಾವೆಯನ್ನು ಹೂಡಿರುತ್ತಾರೆ ಎಂದರೆ ಇರಬಹುದು. ಆ ದಾವೆಯ ಓ ಎಸ್ ನಂ 82/2013 ಎಂದರೆ ಗೊತ್ತಿಲ್ಲ ಆದರೆ ದಾವೆ ಹೂಡಿದ್ದು ನಿಜ ಎಂದು ಹೇಳುತ್ತಾರೆ. ಆ ದಾವೆ ದಿನಾಂಕಃ 26-11-2013 ರಂದು ಸಯ್ಯದ್ ಜಲೀಲ್‌ರವರ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಸಯ್ಯದ್ ಜಲೀಲ್‌ರವರು ದಾಖಲೆಗಳನ್ನು ಸೃಷ್ಟಿ ಮಾಡಿ ಡಿಕ್ರಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ಓ ಎಸ್ ನಂ 363/2012 ರಲ್ಲಿ ಆದ ಡಿಕ್ರಿಯ ಮೊದಲೇ ಸಯ್ಯದ್ ಜಲೀಲ್‌ರವರ ಪರವಾಗಿ ಡಿಕ್ರಿಯಾಗಿತ್ತು ಎಂದರೆ ನಿಜ. ಸದರಿ ಡಿಕ್ರಿಯ ಆಧಾರದ ಮೇರೆಗೆ ನ್ಯಾಯಾಲಯದ ಕಮಿಷನರ್ ರವರ ಮೂಲಕ ಸಯ್ಯದ್ ಜಲೀಲ್‌ರವರ ಹೆಸರಿಗೆ ಕ್ರಯಪತ್ರವನ್ನು ಬರೆದುಕೊಡಲಾಗಿದೆ ಎಂದರೆ ಸರಿಯಲ್ಲ. ಸದರಿ ಸಯ್ಯದ್ ಜಲೀಲ್‌ರವರ ಹೆಸರಿಗೆ ಆದ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ನಿಜ. 9 3/4 ಗುಂಟೆ ಜಮೀನಿನ ಸ್ವಾಧೀನತೆಯನ್ನು ನ್ಯಾಯಾಲಯದ ನಿಯೋಗದ ಮೂಲಕ ಸಯ್ಯದ್ ಜಲೀಲ್‌ರವರಿಗೆ ಬಿಟ್ಟುಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕಃ 05-01-2017 ರಿಂದ ಸಯ್ಯದ್

ಜಲೀಲ್‌ರವರ ಕುಟುಂಬದವರೇ 9 3/4 ಗುಂಟೆ ಜಮೀನಿನ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ನಾನು ಸ್ವಾಧೀನತೆ ಹೊಂದಿರುತ್ತೇನೆ ಎಂದು ಹೇಳುತ್ತಾರೆ. ಸಯ್ಯದ್ ಜಲೀಲ್‌ರವರು ತೀರಿಕೊಂಡ ನಂತರ 5 ರಿಂದ 9 ನೇ ಪ್ರತಿವಾದಿಗಳು 9 3/4 ಗುಂಟೆ ಜಮೀನಿನ ಸ್ವಾಧೀನತೆ ಹೊಂದಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ 5 ರಿಂದ 9 ನೇ ಪ್ರತಿವಾದಿಗಳು ತಂಟೆ ಮಾಡುತ್ತಾರೆಂದು ಒಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ನಿಜ. ಆ ಅರ್ಜಿಗೆ 5 ರಿಂದ 9 ನೇ ಪ್ರತಿವಾದಿಗಳು ತಕರಾರು ಸಲ್ಲಿಸಿದ್ದರು ಎಂದರೆ ನಿಜ. ಸದರಿ ಮಧ್ಯಂತರ ಅರ್ಜಿ ಈ ನ್ಯಾಯಾಲಯದಲ್ಲಿ ವಜಾ ಆಗಿರುತ್ತದೆ ಎಂದರೆ ಸ್ಟೇ ವೆಕೇಟ್ ಆಗಿರುತ್ತದೆ ನಾನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಹೂಡಿದ ಮಧ್ಯಂತರ ಅರ್ಜಿ ವಜಾ ಆಗಿರುತ್ತದೆ ಎಂದರೆ ಅವರು ದಾವಾ ಆಸ್ತಿಯ ಸ್ವಾಧೀನತೆ ಹೊಂದಿಲ್ಲ ಸುಳ್ಳು ಎಂದು ಹೇಳುತ್ತಾರೆ. ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನತೆ ಹೊಂದಿದ್ದರಿಂದ ನನ್ನ ಮಧ್ಯಂತರ ಅರ್ಜಿ ವಜಾ

ಆಗಿರುತ್ತದೆ ಎಂದರೆ ಸರಿಯಲ್ಲ. ಈ ಆದೇಶದ ವಿರುದ್ಧ ನಾನು ರಾಮನಗರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

37. ನಾನು ರಾಮನಗರದ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿಯ ಆದೇಶದ ವಿರುದ್ಧ ಹೂಡಿದ್ದ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ನಾನು ಮೇಲ್ಮನವಿ ಹೂಡಿಲ್ಲ ಎಂದು ಹೇಳುತ್ತಾರೆ. ನಾನು ಮಧ್ಯಂತರ ಅರ್ಜಿಯ ಆದೇಶದ ವಿರುದ್ಧ ಮಾನ್ಯ 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಮುಂದೆ ಎಂ ಎ ನಂ 7/2017 ನ್ನು ಹೂಡಿದ್ದೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ದಿನಾಂಕಃ 19-07-2018 ರಂದು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದ ಆದೇಶದ ಸರಿಯಿರುತ್ತದೆಂದು ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ.

38. ನಾನು ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಯಾವ ಇಸವಿಯಲ್ಲಿ ಮಾಡಿಸಿಕೊಂಡಿರುತ್ತೇನೆ ಗೊತ್ತಿಲ್ಲ. ನನ್ನ ಹೆಸರಿಗೆ ದಾವಾ ಆಸ್ತಿಯ ಖಾತೆ ಆಗುವ ವೇಳೆಯಲ್ಲಿ ನಾನು ಈ ದಾವೆಯನ್ನು ಹೂಡಿದ್ದೆ ಎಂದರೆ ನಿಜ. ನನ್ನ ಹೆಸರಿಗೆ ದಾವಾ ಆಸ್ತಿಯ ಖಾತೆಯಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ, ನಾನು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಸುಳ್ಳು ಖಾತೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನತೆಯನ್ನು ದಿನಾಂಕಃ 05-01-2017 ರಿಂದ ಸಯ್ಯದ್ ಜಲೀಲ್ ಹಾಗೂ ಅವರ ಕುಟುಂಬದವರು ಮಾಲೀಕರಾಗಿ ಅನುಭವಿಸುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಿಸಿದಂತೆ ನನಗೆ 1 ನೇ ಪ್ರತಿವಾದಿ ಯಾವುದೇ ದಾಖಲೆಗಳನ್ನು ಮಾಡಿಕೊಟ್ಟಿಲ್ಲ ಎಂದರೆ

ಸರಿಯಲ್ಲ.

**39.** ನಿಡಿ **12** ಆಗುವಾಗ **1**ನೇ ಪ್ರತಿವಾದಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು **3**ನೇ ಪ್ರತಿವಾದಿ ಶಾಮೀಲಾಗಿ ಸುಳ್ಳು ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ಕೊಟ್ಟು ಸುಳ್ಳು ಡಿಕ್ರಿಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಡಿಕ್ರಿಯ ಆಧಾರದ ಮೇರೆಗೆ ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕ್ರಯದ ಕರಾರು ಪತ್ರ ಸಯ್ಯದ್ ಜಲೀಲ್‌ರವರಿಗೆ **1**ನೇ ಪ್ರತಿವಾದಿಯ ಕಡೆಯಿಂದ ಆಗಿದ್ದು ಸಯ್ಯದ್ ಜಲೀಲ್‌ರವರಿಗೆ ಒ ಎಸ್ ನಂ **82/2013** ರಲ್ಲಿ ಡಿಕ್ರಿಯಾಗಿದ್ದರಿಂದ ಸಯ್ಯದ್ ಜಲೀಲ್ ಹಾಗೂ ಅವರ ಕುಟುಂಬದವರೇ ದಾವಾ ಆಸ್ತಿಯ ಮಾಲೀಕರಾಗಿರುತ್ತಾರೆ

ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**